Re-introduction of Octroi

237. SRI P. RAM DEV (Malleswaram)—Will the Minister for Housing and Urban Development be pleased to state:—

(a) whether it is a fact that they have taken action to re-introduce the Octroi Cess and the reason for the same;

(b) whether it is a fact that heavy loss is sustained by the local bodies due to the abolition of this cess;

(c) whether it is a fact that the local bodies are pressing to re-introduce this Cess ?

SRI DHARAM SINGH (Minister for Housing and Urban Development),—

(a) No

(b) It is a fact that the Municipalities have been put to trouble due to the abolition of this cess. Anticipating this situation, Government is providing on account quarterly grant.

(c) No

ಶ್ರೀ ಪಿ. ರಾಂದೇವ್.—ಆಕ್ಟ್ರಾಯ್ ಸುಂಕವನ್ನು ಪುನಃ ಜಾರಿಗೆ ತರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದರೂ ಸಹ ಅಲ್ಲಿ ಕೆಲಸ ಮಾಡುತ್ತಿದ್ದ ೨ ಸಾವಿರ ಸಿಬ್ಬಂದಿವರ್ಗವನ್ನು ಕೆಲಸವಿಲ್ಲದಿದ್ದರೂ ಸಹ ಮುಂದುವರೆಸಿಕೊಂಡು ಬರಲು ಕಾರಣವೇನು ?

ಶ್ರೀ ಧರ್ಮಸಿಂಗ್.—ಇಲ್ಲಿ ಆಕ್ಟ್ರಾಯ್ ಬಗ್ಗೆ ಉತ್ತರ ಕೊಟ್ಟಿದೆ. ಸಿಬ್ಬಂದಿ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಪಿ. ರಾಂದೇವ್.—ಆಕ್ಟ್ರಾಯ್ ರದ್ದಾಗಿ ಎರಡು ವರ್ಷವಾದರೂ ಸಹ ೨ ಸಾವಿರ ಸಿಬ್ಬಂದಿ ವರ್ಗವನ್ನು ಅಲ್ಲಿಯೇ ಮುಂದುವರೆಸಲು ಕಾರಣವೇನು ? ಬೆಂಗಳೂರು ನಗರ ಕಾರ್ಪೊರೇಷನ್ ಒಂದರಲ್ಲಿಯೇ ಈ ವಿಭಾಗದ ೪೬೫ ಜನರು ಪರ್ಮನೆಂಟ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದು ಅವರಿಗಾಗಿ ೩೦ ಲಕ್ಷ ರೂ.ಗಳನ್ನು ಖರ್ಚು ಮಾಡುತ್ತಿದೆ. ಟೆಂಪರರಿ ಎಸ್ಟಾಬ್ಲಿಷ್‌ಮೆಂಟಿನಲ್ಲಿ ೧೩೧ಜನರು ಕೆಲಸ ಮಾಡುತ್ತಿದ್ದು, ಅವರಿಗಾಗಿ ೯ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗುತ್ತಿದೆ. ಅದೇ ರೀತಿ ವೇ-ಎಸ್ಟಾಬ್ಲಿಷ್‌ಮೆಂಟಿನಲ್ಲಿ ೫೭ ಜನರು ಕೆಲಸ ಮಾಡುತ್ತಿದ್ದು, ಅವರಿಗಾಗಿ ೪ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ. ಈ ಟೆಂಪರರಿ ಎಸ್ಟಾಬ್ಲಿಷ್‌ಮೆಂಟ್‌ನ್ನಾದರೂ ಡಿಸ್-ಮ್ಯಾಂಟಲ್ ಮಾಡಬಹುದಾಗಿತ್ತು. ಆದರೆ ಮಾಡಿಲ್ಲ. ಹೀಗಾಗಿ ಇವರಿಗೆ ಬೇರೆ ಕೆಲಸವನ್ನು ಸಹ ಕೊಡದೆ ತೆರಿಗೆ ಹಣದಲ್ಲಿ ೪೩ ಲಕ್ಷ ರೂಪಾಯಿಗಳನ್ನು ಇವರಿಗಾಗಿ ಖರ್ಚು ಮಾಡಲಾಗುತ್ತಿದೆ. ಇದನ್ನು ಏತಕ್ಕೆ ತಡೆಗಟ್ಟಿಲ್ಲ ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇವರ ವಿಚಾರದಲ್ಲಿ ಡಿ.ಪಿ.ಎ.ಆರ್.ನವರು ಸ್ಕ್ರೂಟಿನಿ ಮಾಡುತ್ತಿದ್ದಾರೆ. ಇವರಿಗೆ ಬೇರೆ ಕಡೆ ಕೆಲಸ ಕೊಡಬೇಕಾಗುತ್ತದೆಯೇ ಹೊರತು ಕೆಲಸದಿಂದ ತೆಗೆದು ಹಾಕುವುದಕ್ಕಾಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಈ ಆಕ್ಟ್ರಾಯ್ ರದ್ದಿನಿಂದ ಕಾರ್ಪೋರೇಷನ್‌ಗಳಿಗೆ ಹಾಗೂ ಆಯಾ ಮುನಿಸಿಪಾಲಿಟಿಗಳಿಗೆ ಏನು ಆದಾಯದ ಕೊರತೆಯಾಗುತ್ತಿದೆ, ಅದನ್ನು ಸರ್ಕಾರದವರು ವರ್ಷದ ಕೊನೆಯಲ್ಲಿ ತುಂಬಿಕೊಡುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೆಂಗಳೂರು ನಗರಸಭೆಗೆ ಸಂಬಂಧಪಟ್ಟಂತೆ ಕೊಡುತ್ತಿರುವ ೧೨ ಕೋಟಿ ರೂಪಾಯಿಗಳನ್ನು ಮುಂಗಡವಾಗಿಯೇ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ಎಲ್ಲ ಕಡೆಗೂ ೩ ತಿಂಗಳಿಗೆ ಒಂದು ಸಲ ಕೊಡುತ್ತಿದ್ದೇವೆ.

ಶ್ರೀ ಮುಳ್ಳೂರು ಆನಂದರಾವ್.—ಕಾರ್ಪೊರೇಷನ್ ಮೀಟಿಂಗ್‌ನಲ್ಲಿ ಅಧಿಕಾರಿಗಳು ಇದನ್ನು ನಮ್ಮ ಗಮನಕ್ಕೆ ತಂದರು. ಸರ್ಕಾರದವರು ಮುಂಗಡವಾಗಿ ಕೊಟ್ಟರೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಅನುಕೂಲವಾಗುತ್ತದೆಂದು ನಮಗೆ ತಿಳಿಸಿದರು. ಆದ್ದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್. — ಈಗ ಆಕ್ಟ್ರಾಯ್ ರದ್ದಿನಿಂದ ಮುನಿಸಿಪಾಲಿಟಿಗಳಿಗೆ ಹಾಗೂ ಕಾರ್ಪೊರೇಷನ್‌ಗಳಿಗೆ ಏನು ತೊಂದರೆಯಾಗಿದೆ, ಅವನ್ನು ಬಗೆಹರಿಸುವ ಸಲುವಾಗಿ ಒಂದು ರಿಸೋರ್ಸಸ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಅದರಲ್ಲಿ ಫೈನಾನ್ಸ್ ಸೆಕ್ರೆಟರಿ ಎಚ್.ಯು.ಡಿ. ಸೆಕ್ರೆಟರಿ ಹಾಗೂ ಪ್ಲಾನಿಂಗ್ ಸೆಕ್ರೆಟರಿ ಅವರು ಇದ್ದಾರೆ. ಅವರು ರಿಸೋರ್ಸಸ್‌ನ್ನು ಯಾವ ರೀತಿ ತುಂಬಿಕೊಡಬೇಕೆಂಬ ಬಗ್ಗೆ ಚರ್ಚೆ ಮಾಡಿ, ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಡುತ್ತಾರೆ.

ಶ್ರೀ ಎಂ. ಚಂದ್ರಶೇಖರ್.—ಈ ಸಿಬ್ಬಂದಿ ವರ್ಗವನ್ನು ಇನ್ನು ಒಂದು ವರ್ಷದಲ್ಲಿ ಬದಲಾವಣೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಅಲ್ಲಿ ಹೆಚ್ಚು ವರಿ ಸಿಬ್ಬಂದಿ ಇದ್ದರೂ ಸಹ ಹೊಸಬರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಧರ್ಮಸಿಂಗ್.—ಹೊಸಬರನ್ನು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಪಿ. ರಾಮದೇವ್.—ತಾವು ಈ ಬಗ್ಗೆ ಚೆಕ್ ಮಾಡಬೇಕು. ಸೆಕ್ಷನ್ ೮೨ (೧)ಕ್ಕೆ ವಿರುದ್ಧವಾಗಿ ಅಲ್ಲಿ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದನ್ನು ತಾವು ಚೆಕ್ ಮಾಡಬೇಕು.

ಇನ್ನು ಕೋಟ್ಯಾಂತರ ರೂಪಾಯಿಗಳನ್ನು ಬಾಕಿ ವಸೂಲಿ ಮಾಡುವುದು ಇದೆ. ಟ್ರಾವೆಲ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಒಂದು ಕೋಟಿ ಬಾಕಿ ಇದೆ, ಕೇರಳಾ ಟ್ರಾನ್ಸ್‌ಪೋರ್ಟಿನಿಂದ ಹಲವಾರು ಲಕ್ಷ ರೂ ಗಳು ಬಾಕಿ ಇದೆ. ಪ್ರಕಾಶ್ ಟ್ರಾನ್ಸ್‌ಪೋರ್ಟಿನಿಂದ ೬೦ ಲಕ್ಷ ರೂ.ಗಳು ಬಾಕಿ ಇದೆ. ಈ ರೀತಿ ೫-೬ ಕೋಟಿ ರೂ.ಗಳು ಬಾಕಿ ವಸೂಲಿ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಅಲ್ಲಿ ಯಾವ ರೀತಿ ವ್ಯವಹಾರ ನಡೆಯುತ್ತಿದೆ ಎಂದರೆ, ಒಂದು ಕೋಟಿ ಬಾಕಿ ಇದ್ದರೆ, ಹತ್ತು ಲಕ್ಷ ಕೊಡಿ, ಬಿಟ್ಟುಬಿಡುತ್ತೇವೆ ಎಂದು ಹೇಳುತ್ತಿದ್ದಾರೆ. ಮೊದಲು ಈ ಬಗ್ಗೆ ಮೆಮೋ ಇಷ್ಟೂ ಮಾಡುತ್ತಾರೆ. ಅವರೇನಾದರು ಕೇಳಿದಷ್ಟು ಹಣ ಕೊಟ್ಟರೆ ಮೆಮೋ ತೆಗೆದುಹಾಕಿಬಿಡುತ್ತಾರೆ. ಅಲ್ಲಿಗೆ ವ್ಯವಹಾರ ಮುಗಿದು ಹೋಯಿತು. ಈ ರೀತಿಯಾದ ವ್ಯವಹಾರ ನಡೆಯುತ್ತಿದೆ. ಅಲ್ಲಿ ಹಿಂದೆ ಒಂದು ಸಾರಿ ಅವ್ಯವಹಾರ ನಡೆಯಿತು. ಡ್ಯೂಪ್ಲಿಕೇಟ್ ರಸೀತಿಯನ್ನು ಕೊಟ್ಟು ಕೋಟ್ಯಾಂತರ ರೂಪಾಯಿ ಗಳಷ್ಟು ಸುಲಿಗೆ ನಡೆಯಿತು. ಈ ರೀತಿ ಹಣ ಸುಲಿಗೆಯಾಗತಕ್ಕಂಥಾದ್ದನ್ನು ನಿಲ್ಲಿಸಬೇಕೆಂದು ನಾವು ಅನೇಕ ಸಾರಿ ಹೇಳಿದ್ದೇವೆ. ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಏನೊಂದು ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ ಅದನ್ನು ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Graduates Registered as eligible for Stipends.

256 SRI M. C. BASAPPA (Chamarajnagar).—Will the Minister for Small Scale Industries, Labour and Wakf be pleased to state.—

(a) the total number of Graduates registered as eligible for stipend ;

(b) the number of them who are actually receiving the stipend ?

SRI C. M. IBRAHIM (Minister for Small Scale Industries, Labour & Wakf).—

(a) 37,654 as on 29-2-1980.

(b) 14,273 as on 29-2-1980.